# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**S C No**. 22/2021

**ದೋ.ಸಾ–45** **ಫ್ರಾ.ಸಾ. : 30**

| | | |
|---|---|---|
| ಸಾಕ್ಷಿಯ ಹೆಸರು | : | ಡಾ: ಚತುರ್ಮುಖ ವಿ.ಎಸ್. |
| ತಂದೆಯ ಹೆಸರು | : | ಸಾಯಿ ನಾಗೇಶ ವಿ.ಕೆ. |
| ವಯಸ್ಸು | : | 37 ವರ್ಷ |
| ಕೆಲಸ | : | ಸಿನಿಯರ್ ಸೈಂಟಿಪಿಕ್ ಅಫೀಸರ್, ಆಡಿಯೋ/ವಿಡಿಯೋ ಪಾಎರನ್ಸಿಕ್ ಸೆಕ್ಷನ್, ಸ್ಟೇಟ್ ಪಾರೆನ್ಸಿಕ್, ಸೈನ್ಸ್ ಲೆಬೋರಟರಿ, ಮಡಿವಾಳ, ಬೆಂಗಳೂರು. |
| ವಾಸ | : | ಬೆಂಗಳೂರು. |

**ದಿನಾಂಕಃ 10.02.2026 ರಂದು ಸಾಕ್ಷಿಯು ವಿ.ಸಿ. ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:–**

1. ಡಿಸೆಂಬರ್ –2019 ರಿಂದ ಇಲ್ಲಿಯವರೆಗೆ ನಾನು ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯದ ಆಡಿಯೋ/ವಿಡಿಯೋ ವಿಭಾಗದಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಭೌತಶಾಸ್ತ್ರದ ವಿಷಯದಲ್ಲಿ ಎಂ.ಎಸ್ಸಿ ಪದವಿ ಹಾಗೂ ಪಿ.ಹೆಚ್‌ಡಿ ಯನ್ನು ಮಾಡಿದ್ದೇನೆ. ಈವರೆಗೆ ನಾನು ಸುಮಾರು 1200 ಪ್ರಕರಣಗಳಲ್ಲಿ Electronic Device ಗಳಲ್ಲಿರುವ ವಿಡಿಯೋ ಮತ್ತು ಆಡಿಯೋಗಳನ್ನು ವಿಶ್ಲೇಷಣೆ ನಡೆಸಿ ವರದಿಯನ್ನು ನೀಡಿರುತ್ತೇನೆ ಹಾಗೂ ಸುಮಾರು 150 ಪ್ರಕರಣಗಳಲ್ಲಿ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿದಿರುತ್ತೇನೆ.

2. ದಿ.08.06.2021 ರಂದು ಹೊನ್ನಾವರ ಪೊಲೀಸ್ ಠಾಣೆಯ ಗುನ್ನಾ ಸಂ. 136/2021 ಕ್ಕೆ ಸಂಬಂಧಿಸಿದಂತೆ ಪೊಲೀಸ್ ಸಿಬ್ಬಂದಿಯಾದ ಚಾಸಾ–33 ರವರು ಈ

ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ಒಟ್ಟು 05 ವಸ್ತುಗಳನ್ನು ವಿಶ್ಲೇಷಣೆಗಾಗಿ ಕೋರಿಕೆ ಪತ್ರದೊಂದಿಗೆ ನಮ್ಮ ಪ್ರಯೋಗಾಲಯಕ್ಕೆ ನೀಡಿದ್ದು, ಅದನ್ನು ನಮ್ಮ ಪ್ರಯೋಗಾಲಯದ ಸ್ವೀಕೃತಿ ವಿಭಾಗದವರು ಪಡೆದುಕೊಂಡು, ನಂತರ ಅದನ್ನು ಮೊಬೈಲ್ ಫೋರೆನ್ಸಿ ಕ್ ವಿಭಾಗಕ್ಕೆ ನೀಡಿರುತ್ತಾರೆ. ಆದರೆ ಸದರಿ ವಿಷಯವು ಆಡಿಯೋ/ವಿಡಿಯೋ ವಿಭಾಗಕ್ಕೆ ಸಂಭಂದಿಸಿದ ವಿಷಯವಾಗಿದ್ದರಿಂದ, ಸದರಿ ವಸ್ತುಗಳನ್ನು ದಿ.09.06.2021ರಂದು ನಮ್ಮ ವಿಭಾಗಕ್ಕೆ ನೀಡಿರುತ್ತಾರೆ.

3. ಆನಂತರ ದಿ.03.11.2022 ರಂದು ನಮ್ಮ ವಿಭಾಗದ ಮುಖ್ಯಸ್ಥರು ಸದರಿ ವಸ್ತುಗಳನ್ನು ವಿಶ್ಲೇಷಣೆಗಾಗಿ ನನಗೆ ನೀಡಿದ್ದು, ಅವುಗಳನ್ನು ನಾನು ತೆರೆದು ನೋಡಿದಾಗ ಸದರಿ ವಸ್ತುಗಳು ಸುಸ್ಥಿತಿಯಲ್ಲಿದ್ದವು ಹಾಗೂ ಅವುಗಳಿಗೆ ಮೊಹರು ಹಾಕಲಾಗಿದ್ದು, ಮತ್ತು ಸದರಿ ಮೊಹರು ಮಾದರಿ ಮೊಹರಿಗೆ ತಾಳೆ ಆಗುತ್ತಿತ್ತು. ವಸ್ತು ಸಂಖ್ಯೆ 01ನ್ನು ತೆರೆದು ನೋಡಿದಾಗ ಅದರಲ್ಲಿ ಒಂದು Redmi Mobile Phone ಇದ್ದು, ಅದರ Model No. M2003J6B11 ಮತ್ತು ಅದರಲ್ಲಿ ಒಂದು IMEI No.868448047543212 ಮತ್ತು ಇನ್ನೊಂದರ IMEI No. 868448047543220 ಆಗಿರುತ್ತದೆ. ಸದರಿ ಮೊಬೈಲ್ ನಲ್ಲಿ ಒಂದು Airtel SIM ಮತ್ತು ಒಂದು SanDisk micro SD Card ಇರುತ್ತದೆ. ನಂತರ ನಾನು ಸದರಿ ಮೊಬೈಲ್‌ಗೆ D1A ಎಂದು, ಸಿಮ್ ಕಾರ್ಡ್ ಗೆ D1B ಎಂದು, ಎಸ್.ಡಿ ಕಾರ್ಡ್ ಗೆ D1C ಎಂದು ಗುರುತು ಮಾಡಿರುತ್ತೇನೆ. ವಸ್ತು ಸಂಖ್ಯೆ 2 ರಲ್ಲಿ ಮೃತ ಅಬುತಾಲಿಬ್ ರವರ 4'x 6' ಅಳತೆಯ ಒಂದು ಕಲರ್ ಫೋಟೋ ಇದ್ದು, ಅದಕ್ಕೆ D2 ಎಂದು ಗುರುತು ಮಾಡಿರುತ್ತೇನೆ. ವಸ್ತು ಸಂಖ್ಯೆ:3 ರಲ್ಲಿ ಸಾಕ್ಷಿದಾರರಾದ ಜಮಾಲ್‌ಸಾಬ್ ರವರ 4'x 6' ಅಳತೆಯ 3 ಕಲರ್ ಫೋಟೋಗಳು ಇದ್ದು, ಅವುಗಳಿಗೆ D3 ಎಂದು ಗುರುತು ಮಾಡಿರುತ್ತೇನೆ. ವಸ್ತು ಸಂಖ್ಯೆ:4 ರಲ್ಲಿ ಸಾಕ್ಷಿದಾರರಾದ ಅಬ್ದುಲ್ ಕರೀಂ ರವರ 4'x 6' ಅಳತೆಯ 3 ಕಲರ್ ಫೋಟೋಗಳು ಇದ್ದು, ಅವುಗಳಿಗೆ D4 ಎಂದು ಗುರುತು ಮಾಡಿರುತ್ತೇನೆ.. ಸಂಖ್ಯೆ:5 ರಲ್ಲಿ ಆರೋಪಿಯ ಅಬ್ದುಲ್ ಸಲೀನ್ ರವರ 4'x 6' ಅಳತೆಯ 2 ಕಲರ್ ಫೋಟೋಗಳು ಇದ್ದು, ಅವುಗಳಿಗೆ D5 ಎಂದು ಗುರುತು ಮಾಡಿರುತ್ತೇನೆ. ನಂತರ ಸದರಿ ಮೊಬೈಲ್‌ನ್ನು ವೈಜ್ಞಾನಿಕವಾಗಿ ಪರೀಶಿಲಿಸಲು ವಿಭಾಗದಲ್ಲಿರುವ ಫೋರೆನ್ಸಿಕ್ ತಂತ್ರಾಂಶಗಳನ್ನು ಬಳಸಿ, ಸದರಿ ಮೊಬೈಲ್‌ನಲ್ಲಿ ಇದ್ದಂತಂಹ ವಿಡಿಯೋ ದತ್ತಾಂಶವನ್ನು ಹೊರತೆಗೆದು, ಸದರಿ ವಿಡಿಯೋದಲ್ಲಿದ್ದ ವ್ಯಕ್ತಿಗಳನ್ನು D2 ರಿಂದ D5 ವರೆಗೆ

ಗುರುತುಮಾಡಲಾದ ಫೋಟೋಗಳಲ್ಲಿರುವ ವ್ಯಕ್ತಿಗಳೊಂದಿಗೆ ತಾಳೆ ಮಾಡಿ, ನನ್ನ ವರದಿ ಮತ್ತು ಅಭಿಪ್ರಾಯವನ್ನು ನೀಡಿರುತ್ತೇನೆ. D1A ಎಂದು ಗುರುತಿಸಿರುವ ಮೊಬೈಲ್ ಫೋನ್‌ನಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಒಂದು ವಿಡಿಯೋ ಫೈಲ್ ವಿವರವಿದ್ದು, ಅದರ ವಿವರವನ್ನು ನನ್ನ ವರದಿಯಲ್ಲಿ ಈ ಕೆಳಗಿನಂತೆ ನಮೂದಿಸಿರುತ್ತೇನೆ.

| **Sl No.** | **File Name** | **MD5 Hash Value** | **Size in MB** | **Created Date and Time** |
|---|---|---|---|---|
| 01 | VID_20210503_131356.mp4 | ed41f77119f0220a20f8bb4b14256a8a | 79.9 | 03.05.2021 13:14 |

4. ವಸ್ತು ಸಂಖ್ಯೆ :1 (D1A) ಮೊಬೈಲ್ ಫೋನ್ ನಲ್ಲಿರುವ ವಿಡಿಯೋ ಫೈಲ್‌ನಲ್ಲಿ ಕಂಡುಬರುವ ಆರೋಪಿ ಅಬ್ದುಲ್ ಸಲೀನ್ ರವರ ಮುಖ ಚಹರೆಗಳು, ವಸ್ತು ಸಂಖ್ಯೆ:5 ಛಾಯಾಚಿತ್ರದಲ್ಲಿರುವ ವ್ಯಕ್ತಿಯ ಮುಖ ಚಹರೆಗಳು ಹೋಲಿಕೆ ಆಗುತ್ತದೆ. ಸದರಿ ವಿಡಿಯೋ ಫೈಲ್‌ನಲ್ಲಿರುವ ದಿನಾಂಕ ಮತ್ತು ಸಮಯಕ್ಕೆ ತಾಳೆ ಆಗುತ್ತದೆ ಹಾಗೂ ಹೋಲಿಕೆ ಮಾಡಿದ ಮುದ್ರಿತ ಪ್ರತಿಯನ್ನು ಅನೇಕ್ಷರ್–1 ನ್ನು ಲಗತ್ತಿಸಿರುತ್ತೇನೆ.

5. ವಸ್ತು ಸಂಖ್ಯೆ :1 (D1A) ಮೊಬೈಲ್ ಫೋನ್ ನಲ್ಲಿರುವ ವಿಡಿಯೋ ಫೈಲ್‌ನಲ್ಲಿ ಕಂಡುಬರುವ ಮೃತ ಅಬುತಾಲಿಬ್ ರವರ ಮುಖ ಚಹರೆಗಳು, ವಸ್ತು ಸಂಖ್ಯೆ:2 ರಲ್ಲಿರುವ ಛಾಯಾಚಿತ್ರದಲ್ಲಿರುವ ವ್ಯಕ್ತಿಯ ಮುಖ ಚಹರೆಗಳು ಹೋಲಿಕೆ ಆಗುತ್ತದೆ. ಸದರಿ ವಿಡಿಯೋ ಫೈಲ್‌ನಲ್ಲಿರುವ ದಿನಾಂಕ ಮತ್ತು ಸಮಯಕ್ಕೆ ತಾಳೆ ಆಗುತ್ತದೆ ಹಾಗೂ ಹೋಲಿಕೆ ಮಾಡಿದ ಮುದ್ರಿತ ಪ್ರತಿಯನ್ನು ಅನೇಕ್ಷರ್–2 ನ್ನು ಲಗತ್ತಿಸಿರುತ್ತೇನೆ.

6. ವಸ್ತು ಸಂಖ್ಯೆ :1 (D1A) ಮೊಬೈಲ್ ಫೋನ್ ನಲ್ಲಿರುವ ವಿಡಿಯೋ ಫೈಲ್‌ನಲ್ಲಿ ಕಂಡುಬರುವ ಸಾಕ್ಷಿದಾರರಾದ ಜಮಾಲ್‌ಸಾಬ್ ರವರ ಮುಖ ಚಹರೆಗಳು, ವಸ್ತು ಸಂಖ್ಯೆ:3 ಛಾಯಾಚಿತ್ರದಲ್ಲಿರುವ ವ್ಯಕ್ತಿಯ ಮುಖ ಚಹರೆಗಳು ಹೋಲಿಕೆ ಆಗುತ್ತದೆ. ಸದರಿ ವಿಡಿಯೋ ಫೈಲ್‌ನಲ್ಲಿರುವ ದಿನಾಂಕ ಮತ್ತು ಸಮಯಕ್ಕೆ ತಾಳೆ ಆಗುತ್ತದೆ ಹಾಗೂ ಹೋಲಿಕೆ ಮಾಡಿದ ಮುದ್ರಿತ ಪ್ರತಿಯನ್ನು ಅನೇಕ್ಷರ್–3 ನ್ನು ಲಗತ್ತಿಸಿರುತ್ತೇನೆ.

7. ವಸ್ತು ಸಂಖ್ಯೆ :1 (D1A) ಮೊಬೈಲ್ ಫೋನ್ ನಲ್ಲಿರುವ ವಿಡಿಯೋ ಫೈಲ್‌ನಲ್ಲಿ ಕಂಡುಬರುವ ಸಾಕ್ಷಿದಾರರಾದ ಅಬ್ದುಲ್ ಕರೀಂ ರವರ ಮುಖ ಚಹರೆಗಳು, ವಸ್ತು ಸಂಖ್ಯೆ:4

ಛಾಯಾಚಿತ್ರದಲ್ಲಿರುವ ವ್ಯಕ್ತಿಯ ಮುಖ ಚಹರೆಗಳು ಹೋಲಿಕೆ ಆಗುತ್ತದೆ. ಸದರಿ ವಿಡಿಯೋ ಫೈಲ್‌ನಲ್ಲಿರುವ ದಿನಾಂಕ ಮತ್ತು ಸಮಯಕ್ಕೆ ತಾಳೆ ಆಗುತ್ತದೆ ಹಾಗೂ ಹೋಲಿಕೆ ಮಾಡಿದ ಮುದ್ರಿತ ಪ್ರತಿಯನ್ನು ಅನೇಕ್ಷರ್–4 ನ್ನು ಲಗತ್ತಿಸಿರುತ್ತೇನೆ.

8. ಮೊಬೈಲ್ ಫೋನ್‌ನಲ್ಲಿ ಕಂಡುಬರುವ ವಿಡಿಯೋ ದೃಶ್ಯಾವಳಿಯನ್ನು ಪರಿಶೀಲಿಸಿದ್ದು, ಅದು ನೈಜ್ಯತೆಯಿಂದ ಕೂಡಿರುತ್ತದೆ. ಸದರಿ ವಿಡಿಯೋ ಫೈಲ್ ಇದೇ ಮೊಬೈಲ್ ಫೋನ್‌ನಲ್ಲಿ ರಿಕಾರ್ಡ್ ಮಾಡಲಾಗಿದೆಯೇ ಎಂದು ಹೇಳಲು ಸಾಧ್ಯವಿಲ್ಲ. ಅಂತಹ ವೈಶಿಷ್ಟತೆಗಳು ಕೇವಲ ಐ ಫೋನ್ ಮೊಬೈಲ್ ಫೋನ್‌ಗಳಲ್ಲಿ ಮಾತ್ರ ಕಂಡುಬರುತ್ತದೆ. ಹಾಗೂ ಇತ್ತೀಚೆಗೆ ಬರುವಂತಹ Advance Android ಫೋನ್‌ಗಳಲ್ಲಿಯೂ ಸಹ ಕಂಡು ಬರುತ್ತದೆ. ನಾನು ಪರೀಕ್ಷಿಸಿದ ಮೊಬೈಲ್ ಫೋನ್ ಹಳೇ ಮಾದರಿಯ ಮೊಬೈಲ್ ಆಗಿದ್ದು, ಅದರಲ್ಲಿ ರೆಕಾರ್ಡ್ ಮಾಡಿರುವುದನ್ನು ಕಂಡು ಹಿಡಿಯಲು ಸಾಧ್ಯವಿಲ್ಲ. ವಿಶ್ಲೇಷಣೆಯ ನಂತರ ಮೊಬೈಲ್ ಹಾಗೂ ಫೋಟೋಗಳು ಹಾಗೂ ಅನೇಕ್ಷರ ಪ್ರತಿಗಳನ್ನು ಸೀಲ್ ಮಾಡಿ, ಮೊಹರು ಹಾಕಿ, ಮಾದರಿ ಮೊಹರುನೊಂದಿಗೆ ನನ್ನ ಅಭಿಪ್ರಾಯದ ವರದಿಯನ್ನು ಸಂಬಂಧಿಸಿದ ಪೊಲೀಸ್‌ರಿಗೆ ಕಳುಹಿಸಿರುತ್ತೇನೆ ಹಾಗೂ ನಾನು ನೀಡಿದ ವರದಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿ ತಾನು ನೋಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–105 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ–105(ಎ ರಿಂದ ಡಿ) ಎಂದು ಗುರುತಿಸಲಾಯಿತು. ಮಾದರಿ ಮೊಹರನ್ನು ನಿಪಿ–105/1 ಎಂದು, ಅದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–105/1(ಎ) ಎಂದು ಗುರುತಿಸಿಲಾಯಿತು. ನಾನು ವಿಶ್ಲೇಷಣೆ ಮಾಡಿದ ಛಾಯಾ ಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅವುಗಳನ್ನು ನೋಡಿರುತ್ತೇನೆ. ಅವುಗಳನ್ನು ಈಗಾಗಲೇ ನಿಪಿ–44, 50, 51, 52 ಎಂದು ಗುರುತಿಸಲಾಗಿದೆ. ನಾನು ತಾಳೆ ಮಾಡಿ ನೋಡಿದ ಮುದ್ರಿತ ಪ್ರತಿಯನ್ನು ಅನೇಕ್ಷರ–1 ರಿಂದ 4 ಎಂದು ಗುರುತಿಸಿದ್ದು, ಅವುಗಳನ್ನು ಈಗ ಸಾಕ್ಷಿ  ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–106 ರಿಂದ 109 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–106 (ಎ) ರಿಂದ 109(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ವಿಶ್ಲೇಷಣೆ ಮಾಡಿದ ವಸ್ತು ಸಂಖ್ಯೆ–1 ನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ಎಂ.ಓ.–11 ಎಂದು ಗುರುತಿಸಲಾಗಿರುತ್ತದೆ.  ವಿಶ್ಲೇಷಣೆ ಮಾಡಿದ ಮೊಬೈಲ್‌ನ ಹಿಂಭಾಗದಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಎಂ.ಓ–11(ಎ) ಎಂದು ಗುರುತಿಸಲಾಯಿತು.

ಅದೇ ರೀತಿ ಮೊಬೈಲ್ ನೊಂದಿಗಿರುವ ಸಿಮ್ ಕಾರ್ಡ್ ಮತ್ತು ಎಸ್.ಡಿ. ಕಾರ್ಡ್‌ನ್ನು ನೋಡಿ ಗುರುತಿಸಿರುತ್ತಾರೆ. ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಗೆ "ಮುದ್ದೆ ಮಾಲು-11 ಮೊಬೈಲ್ ಫೋನ್‌ನಲ್ಲಿ ಇದ್ದಂತಹ ವಿಡಿಯೋ ರೆಕಾರ್ಡ್ ಆಗಿರುವ ಬಗ್ಗೆ ಬೇರೆ ಯಾವುದಾದರು ತಾಂತ್ರಿಕ ಅಂಶಗಳನ್ನು ಅನುಸರಿಸಿದ್ದೀರಾ" ಎಂದು ಪ್ರಶ್ನೆ ಕೇಳಿದ್ದು, ಅದಕ್ಕೆ ಉತ್ತರವಾಗಿ "D1A ಎಂದು ಗುರುತು ಮಾಡಿರುವ ಮೊಬೈಲ್ ಫೋನಿನಲ್ಲಿ ಕಂಡುಬರುವ ಪ್ರರಕಣ್ಕೆ ಸಂಬಂಧಿಸಿದ ವಿಡಿಯೋ ಫೈಲ್‌ನ ಹೆಸರಿನಲ್ಲಿ ದಿನಾಂಕ ಮತ್ತು ಸಮಯಗಳು ಕಂಡುಬಂದಿದ್ದು, ಸದರಿ ದಿನಾಂಕ ಮತ್ತು ಸಮಯವು Meta data ದಲ್ಲಿ ಕಂಡುಬರುವ ವಿಡಿಯೋ ಸೃಷ್ಟಿಯಾದ ದಿನಾಂಕ ಮತ್ತು ಸಮಯಕ್ಕೆ ಹೋಲಿಕೆಯಾಗಿರುವುದು ಕಂಡುಬರುತ್ತದೆ. ಈ ಅಂಶವನ್ನು ಪರಿಗಣಿಸಿ ಸದರಿ ಮೊಬೈಲ್ ಫೋನ್‌ನಲ್ಲಿ ಈ ವಿಡಿಯೋವನ್ನು ರೆಕಾರ್ಡ್ ಮಾಡಿರುವ ಸಾಧ್ಯತೆ ಹೆಚ್ಚು ಇರುತ್ತದೆ ಹಾಗೂ ಸಾಮಾಜಿಕ ಜಾಲ ತಾಣವಾದ ವಾಟ್ಸಾಪ್ ಮುಖಾಂತರ ಶೇರ್ ಮಾಡಿದ್ದಲ್ಲಿ ವಿಡಿಯೋ ಫೈಲ್ ನ ಹೆಸರು ಬದಲಾವಣೆಗೊಳ್ಳುತ್ತದೆ ಹಾಗೂ ಮೂಲ ವಿಡಿಯೋ ಸೃಷ್ಟಿಯಾದ ದಿನಾಂಕವು Meta data ದಲ್ಲಿ ಕಂಡುಬರುವುದಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ ರವರಿಂದಃ**

ಪಾಟೀ ಸಾವಲಿಗೆ ಕಾಲಾವಕಾಶ ಕೋರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ